ಬಸ್ಸಿಗಾಗಿ ಕೌಡಿಚ್ಚಾರಿಗೆ ಹೋಗುತ್ತಿದ್ದೆ. ಎಪ್ರಿಲ್ ತಿಂಗಳ ಸುಡುಬಿಸಿಲಿಗೆ ಶನಿವಾರ ಮಧ್ಯಾಹ್ನ ನಡೆದು ಬರುವಾಗ ಮತ್ತೆ ಅದೇ ಭೂತ ನನ್ನ ಬೆನ್ನ ಹಿಂದೆಯೇ ಸಿಡಿಯಿತು. ಮರದಿಂದ ಮರಕ್ಕೆ ನೆಗೆದು ಹಾರಿಕೊಂಡು ಹೋದ ಹಾಗೆ ಭಾಸವಾಯಿತು. ಮಂಗ–ಸಿಂಗಳೀಕವೋ ನವಿಲೋ ಕಾಗೆಯೋ ಸ್ವಲ್ಪ ಹೊತ್ತು ಅಲ್ಲೇ ಇದ್ದು ಗಮನಿಸಿದೆ. ರಬ್ಬರ್ ಹಾಲು ಹೊತ್ತುಕೊಂಡು ಅಲ್ಲೇ ಒಂದೆರಡು ಸಿಂಹಳಿ, ತಮಿಳು ಹೆಂಗಸರು ಗುಡ್ಡೆ ಇಳಿದು ಬರುತ್ತಿದ್ದರು. ``ಈ ಕಡೆಯಿಂದ ನಿಮ್ಮ ಕಡೆ ಏನಾದರೂ ಬಂತಾ, ಓಡಿತಾ?'' ಎಂದೆ. ಬಹುಶಃ ನನ್ನ ಕನ್ನಡ, ತುಳು ಅವರಿಗೆ ಸ್ವಲ್ಪವೂ ಅರಿಯಲಿಲ್ಲ. ಅವರು ಇಲ್ಲ ಅಂದ್ರು. ಏನೂ ಕಾಣದಾದಾಗ ನೋಡುವ ಎಂದು ಧೈರ್ಯದಿಂದ ಹಜ್ಜೆಯಿಟ್ಟೆ. ಮತ್ತೆ ಸೋಂಪ, ಶಾಂತಣ್ಣ, ದೇವುಪೂಂಜ ಪ್ರತಾಪ ಎಲ್ಲವೂ ಒಮ್ಮೆಲೇ ನೆನಪಿಗೆ ಬಂತು.

ಇನ್ನೂ ಒಂದು ಫರ್ಲಾಂಗು ದಾಟಿರಲಿಲ್ಲ. ಮತ್ತೆ ಬೆನ್ನ ಹಿಂದೆ ಪಿಶಾಚಿ, ರಣ ಸಿಡಿಯಿತು. ಪಟಪಟಾಂತ ನನ್ನ ತಲೆಯ ಮೇಲೆ ಸಿಡಿದು ಹಾರಿಕೊಂಡು ಮುಂದೆ ಹೋಯಿತು. ಒಂದು ಮರದ ರೆಂಬೆಯಿಂದ ಹಾರಿ ಮತ್ತೊಂದು ಮರಕ್ಕೆ ನೆಗೆದು ಅಲ್ಲಿ ಸಿಡಿದು ಅಲ್ಲಿಂದ ಹಾಗೆಯೇ ಮುಂದೆ ಮುಂದೆ ಹೋಯಿತು. ಈ ಬಾರಿ ನಾನು ಮೈಯೆಲ್ಲಾ ಕಣ್ಣು, ಕಿವಿಯಾಗಿದ್ದೆ. ಒಂದು ಕಡೆ ಭಯ, ಆತಂಕ. ಹಗಲಾದ ಕಾರಣ, ತೋಟದೊಳಗೆ ಕೆಲಸದಾಳುಗಳು ಇದ್ದುದರಿಂದ ಬಂಡುಧೈರ್ಯ ಇತ್ತು. ಪಟಾಂತ ಸಿಡಿದ ಭೂತದ, ರಣ–ಪಿಶಾಚಿಯ ಒಂದು ಪುಟ್ಟ ಭಾಗ ಈ ಬಾರಿ ನನ್ನ ಕಣ್ಣೆದುರೇ ಮುಂದಿನ ಖಾಲಿ ಹಾದಿಗೆ ಬಿತ್ತು. ಅಯ್ಯಾ ಅದು ರಬ್ಬರ್ ಮರದ ಒಣಗಿದ ಬೀಜ. ಬಿಸಿಲಿಗೆ ಅಂಗೈ ತುಂಬುವ ಆ ದೊಡ್ಡ ಬೀಜ ಮರದ ಮೇಲೆಯೇ ಸಿಡಿದು ಅದರ ಮೂರು ಭಾಗ ಸಮಾನಾಂತರವಾಗಿ ಬೇರೆ ಮರಗಳ ಮೇಲೆ ಹಾರಿ ಆ ತುಂಡು ಅಂಗಾಂಗಗಳ ಸ್ಫೋಟಕ್ಕೆ ಅಷ್ಟೇ ಬಿಸಿಯಾಗಿ ಸಿಡಿಯಲು ಸಿದ್ಧಗೊಂಡ ಮತ್ತೊಂದು ಬೀಜಕ್ಕೆ ತಾಗಿ ಅದು ಅಲ್ಲಿ ಆ ಘರ್ಷಣೆಗೆ ಸಿಡಿದು, ಅದರ ಮೂರು ಭಾಗಗಳು ಮಗದೊಂದಷ್ಟು ಮರಕ್ಕೆ ತಾಗಿ ಅದು ಅಲ್ಲಿ ಹಾಗೆಯೇ ಒಂದಷ್ಟು ಬೀಜಗಳನ್ನು ಸ್ಫೋಟಿಸುವ ಬಿಸಿಬಿಸಿ ಬೀಜದ ರೋಚಕ ಕಥೆ ಕಣ್ಣೆದುರು ಸಾಕ್ಷಿ ಸಮೇತ ಸಿಕ್ಕಿತು. ಇಂಥ ಬಿಸಿ ಬೀಜಗಳು ಬರೀ ಹಗಲಲ್ಲಲ್ಲ, ರಾತ್ರಿಯೂ ಇದೇ ರೀತಿ ಸಿಡಿಯುವ ಕಾರಣ ಊರು ತುಂಬಾ ಭೂತ ಪ್ರೇತಗಳು ಹುಟ್ಟಿಕೊಂಡಿದ್ದವು!

ಈ ರಬ್ಬರ್ ಭೂತದ ಸತ್ಯ ಕತೆಯನ್ನು ಸೋಂಪನಿಗೆ ವಿವರಿಸಬೇಕೆಂದು ಅವನನ್ನು ಹುಡುಕುತ್ತಿದ್ದೆ. ಅವನೆಲ್ಲಿ ಸಿಗುತ್ತಾನೆ? ಆತ ಆತ್ಮಹತ್ಯೆ ಮಾಡಿಕೊಂಡು ಬಹಳ ದಿನಗಳೇ ಆಗಿದ್ದವು. ಈಗ ಈ ಕಥೆಯನ್ನು ಹಂಚಿಕೊಳ್ಳಲು ನನ್ನೊಂದಿಗೆ ಶಾಂತಣ್ಣನೂ ಇಲ್ಲ.

## ನರೇಂದ್ರ ರೈ ದೇರ್ಲ

ಲೇಖಕ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ರೀತಿ ಬದುಕಬೇಕು ಮತ್ತು ಬರೆಯಬೇಕು ಎಂದು ಸದಾ ತುಡಿಯುವ ನರೇಂದ್ರ ರೈ ದೇರ್ಲ ಕಾಲೇಜು ಅಧ್ಯಾಪಕ, ಕೃಷಿಕ ಮತ್ತು ಪತ್ರಕರ್ತ. ಪರಿಸರ, ಕೃಷಿಯ ಬಗ್ಗೆಯೇ ಹೆಚ್ಚು ಬರೆಯುತ್ತಿರುವ ದೇರ್ಲ ಈವರೆಗೆ 30ಕ್ಕಿಂತ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಇವರು ಸಂಪಾದಿಸಿದ 'ತೇಜಸ್ವಿ ಪತ್ರಗಳು' ಕರ್ನಾಟಕದ ಒಂದು ಕಾಲಾವಧಿಯ ಸಾಹಿತ್ಯಿಕ, ಸಾಂಸ್ಕೃತಿಕ ದಾಖಲೆಯಾಗಿದೆ. ಇವರ ಕೃತಿ 'ಸಾವಯವ ಕೃಷಿ'ಯನ್ನು ತೇಜಸ್ವಿ ತಮ್ಮ 'ಪುಸ್ತಕ ಪ್ರಕಾಶ'ದಲ್ಲಿ ಪ್ರಕಟಿಸಿದ್ದು, ಅದು ಎಂಟು ಮುದ್ರಣಗಳನ್ನು ಕಂಡಿದೆ. ಪ್ರಸ್ತುತ ದೇರ್ಲ, ಪುತ್ತೂರಿನ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರು.